ಸಿಕ್ಕಿಸಿಕೊಂಡು 'ಇಲ್ಲೇ ಇದ್ದ ಹುಡುಗ ಇಷ್ಟೊತ್ತಾದರೂ ಬರಲಿಲ್ಲ. ಎಲ್ಲೋತು? ಲೇ ಬಾಲರ್ಾ ಎಲ್ಲಿದ್ದೀಯ? ಗಾಳಿ ಅನ್ನಲ್ಲ, ಮಳೆ ಅನ್ನಲ್ಲ' ಎಂದು ಆತಂಕಕ್ಕೊಳಗಾದಳು. ಊರ್ ಬೀದಿ ನಾಲ್ಕಾರು ಸುತ್ತು ಬಂದು 'ಇಷ್ಟೊತ್ತಂಕ ಎಲ್ಲೂ ಹೋಗಲ್ಲ ನನ್ನುಡ್ಗ' ಅನ್ನುತ್ತ ಅಕ್ಕಪಕ್ಕ ಎಲ್ಲ ಕೇಳಿ ಸುಳಿವಿಲ್ಲದ್ದನ್ನು ಕಂಡು ಕಂಗಾಲಾಗಿದ್ದಳು. ಇವಳ ಹುಡುಕಾಟ ನೋಡಿದ ಬಸಪ್ಪ 'ಎಲ್ಲಾರ ಹುಡುಗರ ಜೊತೆಯಾಗಿ ಮದುವೆಗಿದ್ವೆಗೆ ಹೋತ' ಅಂದನು. ಆ ಮಾತಿಗೆ ಅತ್ತಿಂದ ಬಾಗಮ್ಮ 'ಇಲ್ಲ ಕಣಜ್ಜ, ಗಾಡಿಗಳು ಹೋದಾಗ ಇಲ್ಲೇ ಇತ್ತು, ಅದೆಲ್ಲೋತೋ ಏನೋ ನೋಡನ ಇರಕ್ಕ ಮದುವೆಗೆ ಹೋಗಿರವ್ರು ಬರ್ಲಿ' ದುಗುಡದಲ್ಲಿದ್ದ ದ್ಯಾವಕ್ಕನ ಸಮಾಧಾನಪಡಿಸುತ್ತಿದ್ದಳು.

ಆಚಾರ್ರ ಮನೆಲಿರಬೋದ, ಕೆಂಚಜ್ಜನ ಮನೆಲಿರಬೋದ ಅಂದ್ಕೊಂಡು ಒಂದು ಮನೇನೂ ಬಿಡದೆ ಈ ದ್ಯಾವಕ್ಕ ಹುಡುಕಾಡಿದ್ದಳು. ಕೊಂಬೆ ರೆಂಬೆಗಳು ನೆಲಮುಟ್ಟುವಂತೆ ಬಾಗಿ ತೂರಾಡುತ್ತಿದ್ದ ಮರಗಳನ್ನು ನೋಡಿದ ದ್ಯಾವಕ್ಕ ಇಂಥಾ ಗಾಳಿಯಲ್ಲಿ ಎಲ್ಲಿ ಹೋತೋ, ಏನಾತೋ ಎಂದು ಅವಳೊಳಗೆ ಆತಂಕ ಮೂಡಿ ಊರ ದೇವಿ ತಾಯಿ ಹುಚ್ಚಮ್ಮನ ಪಟದ ಕಡೆಗೆ ಪ್ರಶ್ನಾರ್ಥಕ ದೃಷ್ಟಿ ಬೀರಿದಳು. ದೈವದ ಮೇಲೆ ಭಾರ ಹಾಕಿ ಉತ್ತರಕ್ಕಾಗಿ ಕಾದಳು.

ಮನೆಯಿಂದ ಆಚೆಗೆ ಬಂದ ವಡ್ರ ಹನುಮಕ್ಕ 'ಅಯ್ಯೋ ಕಣ್ ಬಿಟ್ರೆ ಕಣ್ ಕಾಣಲ್ಲ, ಈ ಸರ್ಕಾರ್ದೋರು ಅದೇನೂಂತ ಬೀದಿ ಲೈಟಾ ಆಕಿದ್ರೋ ನಾಕಾಣೆ. ಅಲ್ಲಾ ಕಂಬುದ್ ಬುಡುಕ್ಕೆ ಒಂದು ನಾಯಿ ಹೋದ್ರೂ ಕಾಣಲ್ವಲ್ಲ ಇದೆಂಥಾ ಲೈಟಾಕಿದ್ರು, ನಾವೂ ಆಕ್ತಿವಿ, ಆಕ್ತಿವಿ ಅಂತ ಆಕ್ಯೋಗವೆ ಬೇವರ್ಸಿಗಳು' ಎಂದು ಬೈಯುತ್ತಿದ್ದಳು. ಆ ಕತ್ತಲೆಯೊಳಗಿಂದ ಗವಿರಂಗನ ಹೆಂಡತಿ ದನಿ ಕೇಳಿಬಂತು.

'ಇದ್ಯಾರ್ನೆ ಹಿಂಗೆ ಬೈತಿದ್ದೀಯ ಹನುಮಕ್ಕ' ಎಂದಳು. 'ಇನ್ಯಾರ್ನ ಬೈಲಿ, ಬೀದಿ ದೀಪ ಹಾಕ್ಯೋದವ್ರನ್ನ' ಅಂದಳು ಹನುಮಕ್ಕ. ಆ ಮಾತಿಗೆ ಗವಿರಂಗಣ್ಣನ ಹೆಂಡತಿ, 'ಅವರ್ತಾನೆ ಏನ್ ಮಾಡ್ತಾರೆ, ಮಳೆ ಹೋಗಿ ಮುಗುಲ್ ಸೇರ್ತು ಯಾರ್ನಂದು ಆಡಿದ್ರೇನ್ ಬಂತು. ಜೋಗ್ದಲ್ ನೀರಿಲ್ವಂತೆ' ಅಂತ ಅಂದು, ಆವಕ್ಕ ಟಾರ್ಚ್ ಆಕ್ಕಂಡು ಮನೆಕಡೆಗೆ ಹೆಜ್ಜೆ ಹಾಕಿದಳು. ಆ ಮಾತಿಗೆ ಹನುಮಕ್ಕ 'ಇಲ್ಲಿ ಬೆಳಕ್ ಬರಕ್ಕೆ ಜೋಗದಲ್ಲಿ ನೀರಿಲ್ಲ, ಆದರೆ ಆ ಬೀದಿ ಕಂಬದಲ್ಲಿ ಬಲ್ಪೇ ಇಲ್ಲ, ಅದ್ಕೇನೇಳ್ತಿರಿ' ಅಂತಲೂ ಅಂದಳು. ಮನೆಕಡೆಗೆ ತಿರುಗಿದ ಆವಕ್ಕ ಇತ್ತಗ್ ತಿರ್ಗಿ 'ಬಾಯಿಲ್ಲಿ ಅಂತ ಹತ್ತಿರಕ್ಕೆ ಕರೆದು, ಅಲ್ಲಿ ಬಲ್ಪ್ ಇಲ್ದೆ ಇರೋದಕ್ಕೆ ಕಾರಣಾನೆ ಕಾಯಿ ಕಳ್ಳರು' ಅನ್ನುತ್ತ ಹನುಮಕ್ಕನ ಮುಂದಕ್ಕೆ ನಾಕೆಜ್ಜೆ ಹೋಗ್ತಾ, 'ಆ ನಿಂಗ ಉರೀತಿದ್ದ ಬಲ್ಪ್‌ಗೆ ಕಲ್ಲಲ್ಲೊಡ್ದು ಕಳುದ್ನಂತೆ, ಈ ಕೆಂಚಜ್ಜನ ಹುಡುಗ ಅದನ್ನ ನೋಡಿ ಕೇಳಿದ್ಕೆ ನೀನು ಊರಾಗೆ ಯಾರ್ಗಾದ್ರು ಬಾಯಿಬಿಟ್ರೆ ನಿನ್ ತಲೆಬುರ್ಡೆಗೂ ಇಂಗೇ ಹೊಡೀತಿನಿ' ಎಂದು ಹೆದರಿಸಿದನಂತೆ. ಈವಕ್ಕನ ಮಾತ್ ಕೇಳಿ ಲೊಚಗುಟ್ಟಿದ ಹನುಮಕ್ಕ 'ಅಯ್ಯೋ ಇಂಥವ್ಕೆ ಏನೇಳ್ಲಿ' ಅನ್ನುತ್ತ ಅತ್ತ ಹೆಜ್ಜೆ ಹಾಕುತ್ತ ಏನೋ ಸುಟ್ಟ ವಾಸನೆ ಎಂದು ಮೂಗು ಮುಚ್ಚಿಕೊಂಡಳು.

ಗವಿರಂಗಣ್ಣನ ಹೆಂಡತಿ ಕೈಯಲ್ಲಿದ್ದ ಟಾರ್ಚ್ ಹಾಕ್ಕಂಡು ಮನೆ ಸೇರಿದಳು. ಊರು ಕತ್ಲಲ್ಲಿ ಮುಳುಗಿತು. ಶಂಕರಶೆಟ್ಟಿ ಲಕ್ಷ್ಮಮ್ಮ ಮಗಳ್ನ ವಂದಕ್ಕೆ ಮನೆಯಾಚೆಗೆ ಕರ್ಕಂಡು ಬಂದು ವಂದ ಮಾಡ್ಸಿ, ಅತ್ತಾಗೋಗ್ಬೇಕಾದ್ರೆ, ಅದ್ಯಾಕೋ ದೊಡ್ಡ ಹುಣಸೆ ಮರದ ಕಡಿಕೆ ಕಣ್ಣಾಯ್ಸಿದಾಗ ಆ ತೋಟದೊಳಗೆ ಅದೇನೋ ಬೆಂಕಿ ಉಂಡುಂಡೆ ಥರ ಧಗ ಧಗ ಉರಿದಂಗೆ ಕಂಡು ಹೆದರಿ ಪಕ್ಕದ ಮನೆಯ ಬಾಗಮ್ಮನ ಮನೆಯ ಬಾಗಿಲು ತಟ್ಟಿ, 'ಅಕ್ಕ ಬಾಯಿಲ್ಲಿ' ಅಂತ ಕರೆದು, 'ಅಲ್ನೋಡಿ ಅದೇನು' ಅಂತ ಉರಿಯುತ್ತಿದ್ದ ಬೆಂಕಿಯನ್ನ ತೋರಿಸಿದಳು. ನಿದ್ದೆ ಮಂಪರಿನಲ್ಲಿದ್ದ ಆವಕ್ಕ ಲಕ್ಷ್ಯವನ್ನೆಲ್ಲ ಬೆಂಕಿಯ ಮೇಲೆ ಕೇಂದ್ರೀಕರಿಸಿ ತದೇಕಚಿತ್ತಳಾಗಿ ನೋಡಿ, ಬೇಗ ಗುರುತಿಸಲಾಗದೆ ತನ್ನಿಂದ ತಾನೇ ಎಂಬಂತೆ ಹೊರಬಿದ್ದ ಪ್ರಶ್ನೆಯಿಂದ ತಾನೇ ಚಕಿತಳಾಗಿ 'ಅಯ್ಯೋ ಅದರ ಸೆಲೆಗೆಟ್ಟೋಗ ಅದೇನು?' ಅಂದ್ಕೊಂಡ ಅವಳಿಗೆ ಹಠಾತ್ತನೆ ನೆನಪಾಗಿ, 'ಅಯ್ಯೋ ಶಿವನೆ, ಆ ಹುಚ್ಚಪ್ಪ ನೀರಿಗ್ ಬಿದ್ದು ಜೀವಬಿಟ್ನಲ್ಲ, ಅದೇನಾರ ದೆವ್ವಗಿವ್ವ ಆಗಿರ್ಬೇಕಾ' ಅಂದುಕೊಂಡ ಅವಳಿಗೆ ಪುಟಿದೇಳುವ ಆ ಕೆಂಡದ ಉಂಡೆಗಳಲ್ಲಿ ಹುಚ್ಚಪ್ಪನ ಮುಖವೇ ತಕತಕ ಕುಣಿದಂತಾಗಿ ಬಾಗಮ್ಮನ ಮೈ ಹಿಂಡಿದಂತಾಯಿತು. ಮೈನೆಲ್ಲಾ ಒಂದು ಬಾರಿ ಅದುರಿಸಿ 'ಅಯ್ಯೋ ನಮಗ್ಯಾಕ್ಬೇಕು ಅದೇನಾದರೂ ಆಗ್ಲಿ' ಎಂದು ಮನೆಯೊಳಗೆ ದೌಡಾಯಿಸಿ ಬಾಗಿಲು ಭದ್ರಮಾಡಿಕೊಂಡಳು.

ಊರೆಲ್ಲ ಸುಖ ನಿದ್ರೆಯಲ್ಲಿತ್ತು. ಬೀಸುವ ಗಾಳಿಯಲ್ಲಿ ತೇಲಿಕೊಂಡು ಸಂಪಿಗೆ ಜೊತೆಗೆ ಚಂದ್ರನ ಜೀವಾತ್ಮ ಸಿದ್ದನ ಮನೆಯತ್ತ ಧಾವಿಸಿತು. ಅರಿಯದೆ ಅಪರಾಧವಾಯಿತು ಎಂದು ಚಂದ್ರ ದೇವಕ್ಕಳ ಕ್ಷಮೆ ಬೇಡಿ, ನನ್ನ ಆತ್ಮೀಯ ಸಿದ್ದಮ ಮಗ ತ್ಯಾಗ ಎಲ್ಲಿಗೆ ಹೋದರೂ ನಾನು ಅಲ್ಲಿಗೇ ಹೋಗುತ್ತೇನೆ. ಅನುಗ್ರಹಿಸು ಎಂದು ಬೇಡಿದಳು. ದೊಡ್ಡ ಜಾತಿಯವು ಸಣ್ಣ ಜಾತಿಯವರ ಮನೆಗೆ ಬಂದು ತಬ್ಬಿದರೆ ಏನಾದರೂ ಕೊಡಬೇಕೆಂದರೆ ಈ ಜೀವಗಳಿಗೆ ಕೈಕಾಲುಗಳೇ ಆಡುವುದಿಲ್ಲ. ದೇವಕ್ಕ ಮೈಮೇಲಿನ ಎಚ್ಚರ ತಪ್ಪಿ ಮೂರ್ಛೆ ಹೋಗಿಯೇಬಿಟ್ಟಳು. ರಿಂಗಿಗಳು ತರಂಗಿಗಳಾಗಿ ಇಡೀ ಊರು ಬೀದಿ ಪರಿಮಳದಿಂದ ಕೂಡಿತ್ತು. ಸ್ವಲ್ಪ ಎಚ್ಚರ ಬಂದಮೇಲೆ ನಡೆದುಹೋದದ್ದನ್ನು ನೆನಪಿಸಿಕೊಂಡಳು. ಆಗ ಚಂದ್ರಮಂಡಲದಿಂದ ಒಬ್ಬ ದೇವತಾ ಮನುಷ್ಯ ಬಿಳಿಕುದುರೆಯೊಂದರಲ್ಲಿ ಚಂದ್ರನನ್ನೂ ಮತ್ತು ತ್ಯಾಗನನ್ನೂ ಕೂರಿಸಿ ಹೊತ್ತು ಮಾಯವಾದಂತೆನಿಸಿ ಬೆಚ್ಚಿ ಎದ್ದ ದ್ಯಾವಕ್ಕನಿಗೆ ಅದೇನೋ ಹೊಟ್ಟೆಯಲ್ಲಿ ಅನ್ನಸಂಕಟ ತಡೆಯಲಾರದೆ ಎಚ್ಚರಾಗಿ ಗೌ ಎಂದು ಕಾಡುತ್ತಿದ್ದ ಮಗನ ನೆನಪಿನಿಂದ ತೊಯ್ದಾಡಿಹೋದಳು. ಎಲ್ಲಿಹೋದ, ಮನೆ ಬಿಟ್ಟು ಹೋದದ್ಯಾಕೆ ಎಂದು ಈ ತಾಯಿಯ ನೆನೆದು ಪುರಾಣ ಕಥೆಗಳಲ್ಲಿ ಧುತ್ತೆಂದು ಬರುವ ಒಳ್ಳೆಯ ಪಾತ್ರದಂತೆ ಬಂದು ಇದ್ದಕ್ಕಿದ್ದಂತೆ ಎದುರು ನಿಲ್ಲಬಾರದೆ ಎಂದು ಮಗನ ನೆನೆದಳು.

ಅತ್ತಿಂದ ಗಾಡಿಗಳು ಬರುತ್ತಿರುವ ಸದ್ದಾಯಿತು. ಮದುವೆಗೆ ಊರ ಜನರನ್ನು ತುಂಬಿಕೊಂಡು ಹೋಗಿದ್ದ ಗಾಡಿಗಳು ದೊಡ್ಡ ಆಲದ ಮರದ ದಿಕ್ಕಿನಿಂದ ಬಂದು ಗೋಣಿ ಮರದ ಹತ್ತಿರ ನಿಂತವು. ದ್ಯಾವಕ್ಕ ಹೊರಗೆ ಬಂದಳು. ಅಲ್ಲೆಲ್ಲ ತಡಕಾಡಿ ಎಲ್ಲರನ್ನೂ ಕೇಳಿದಳು. 'ನನ್ನ ಮಗ ಏನಾರ ಬಂತೇಂದ್ರಪ್ಪ'. 'ಇಲ್ಲ' ಎನ್ನುವ ಉತ್ತರಕ್ಕೆ ಸಮಾಧಾನವಾಗದೆ ಮತ್ತೆ ಮತ್ತೆ ಆ ಗುಂಪಲ್ಲಿ, ಎಲ್ಲಾ ಗಾಡಿಗಳ ತೊಟ್ಟಿಲೊಳಗೆ ತಡಕಾಡಿದಳು.

## ಕಳೆದ ಸಂಚಿಕೆಯಲ್ಲಿ



ತಾನು ಸಾರಿಸಿದ ಕಣದಲ್ಲಿ ಪುಟ್ಟ ಹುಡುಗನೊಬ್ಬನ ಹೆಜ್ಜೆಗಳನ್ನು ಕಂಡ ಮಲ್ಲ ಕ್ರುದ್ಧನಾದ. ಆ ಪುಟ್ಟ ಹೆಜ್ಜೆಗಳನ್ನು ಹುಡುಕುತ್ತಾ ಹೊರಟ ಅವನಿಗೆ ತ್ಯಾಗನದೇ ಆ ಕಿತಾಪತಿ ಅನ್ನಿಸಿತು. ಪುಟ್ಟ ಹುಡುಗನನ್ನು ಮಲ್ಲ ಮನಬಂದಂತೆ ಥಳಿಸತೊಡಗಿದ. ಆ ಅನ್ಯಾಯವನ್ನು ನೋಡಲಾರದೆ ನೊಂದ ಗವಿರಂಗಣ್ಣ, ಹುಡುಗನನ್ನು ಬಿಡಿಸಿಕೊಂಡು ಅವನ ಅವ್ವನ ಬಳಿಗೆ ತಂದುಬಿಟ್ಟರು. ನಿನ್ನ ಕಾರಣದಿಂದಾಗಿ ಊರವರಿಂದೆಲ್ಲ ಕೇಳಬಾರದ ಮಾತುಗಳನ್ನು ಕೇಳಬೇಕಾಯಿತು ಎಂದು ಕೋಪಗೊಂಡ ದ್ಯಾವಕ್ಕನೂ ತ್ಯಾಗನಿಗೆ ಪೆಟ್ಟುಕೊಟ್ಟಳು. ಪಾಪದ ಹುಡುಗ, ಇಲ್ಲೇ ಇದ್ದರೆ ಹಾಳಾಗುತ್ತಾನೆಂದು ಭಾವಿಸಿದ ಗವಿರಂಗಣ್ಣ, ತ್ಯಾಗನನ್ನು ಸಿದ್ಧಗಂಗೆ ಮಠಕ್ಕೆ ಸೇರಿಸಲು ಯೋಚಿಸಿದ. ಬಾಣಂತನಕ್ಕೆ ತವರಿಗೆ ಬಂದ ಮಗಳನ್ನು ಗಂಡನ ಮನೆಗೆ ಕಳಿಸುವ ಖರ್ಚಿಗೆ ಹೊಂದಿಸಿಕೊಳ್ಳಲು, ಸಾಕಿದ್ದ ಹಂದಿಮರಿಯನ್ನು ಕುಯ್ದು ಗುಡ್ಡೆ ಹಾಕಲು ನಂಜಣ್ಣ ನಿರ್ಧರಿಸಿದ. ಆದರೆ, ವಿಧಿಲಿಖಿತ ಬೇರೆಯೇ ಇತ್ತು. ಬೆಳಗ್ಗೆ ತನ್ನನ್ನು ಹಿಡಿಯಲು ಮುಂದಾದ ಗುಂಪಿಗೆ ಕೈಕೊಟ್ಟ ಹಂದಿ ಊರಲ್ಲೆಲ್ಲ ಓಡತೊಡಗಿತು. ಹಂದಿಯ ಬೆನ್ನಿಗೆ ಬಿದ್ದ ಗುಂಪು ನಿರಾಶೆಯಿಂದ ಕೈಚೆಲ್ಲಬೇಕಾಯಿತು.